ಓ.ಎಸ್. ನಂ.122/2019
DW.2

ಸಾಕ್ಷಿಗೆ ಇಂದು ದಿನಾಂಕ 05/06/2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಶ್ರೀ ಎಸ್.ಎಸ್.ಕೆ ಪ್ರತಿವಾದಿ ಪರ ವಕೀಲರಿಂದ**

ನನ್ನ ಹೇಳಿಕೆಗೆ ಸರಿಯಾಗಿ ವಕೀಲರು ಪ್ರಮಾಣಪತ್ರವನ್ನು ತಯಾರುಮಾಡಿದ್ದಾರೆ. ಅದರಲ್ಲಿರುವ ವಿಷಯಗಳೆಲ್ಲವೂ ಸತ್ಯವಾಗಿರುತ್ತವೆ. ಅದರಲ್ಲಿ ನನ್ನ ಸಹಿ ಇರುತ್ತದೆ.

**ಪಾಟೀ ಸವಾಲು : ಶ್ರೀ ವಿ.ಬಿ.ಆರ್ ವಾದಿ ಪರ ವಕೀಲರಿಂದ**

ನಾನು ಕಳೆದ 12 ವರ್ಷಗಳಿಂದ ಮುಡಬಿದರಿ, ಮಂಗಳೂರು-ಜಿಲ್ಲೆಯಲ್ಲಿ ವಾಸವಾಗಿದ್ದೇನೆ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಸಂಪೂರ್ಣವಾಗಿ ಓದಿದ ನಂತರ ಸಹಿ ಮಾಡಿದ್ದೇನೆ. ನಾನು ಕಳೆದ 12 ವರ್ಷಗಳಿಂದ ಮುಡಬಿದರಿ, ಮಂಗಳೂರು-ಜಿಲ್ಲೆಯಲ್ಲಿ ವಾಸವಾಗಿದ್ದೇನೆ ಅಂತ ನುಡಿದಿದ್ದರು ಕೂಡ ಸಿಂಧನೂರು ಪಟ್ಟಣದಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹುಸೇನ್ ಬೀ ಗಂಡ ಬಾಷುಮಿಯ ರವರಿಂದ ಆಸ್ತಿಯನ್ನು ಖರೀದಿ ಮಾಡಿದ್ದೇನೆ. ಸೈಯದ್ ಬಾಷುಮಿಯ ತಂದೆ ಮೊಹಮ್ಮದ್ ಸಾಬ್ ರವರು ದಾವೆಯನ್ನು ಆಸ್ತಿಯನ್ನು ಬಾಷ ಸಾಬ ಇವರಿಗೆ ದಿನಾಂಕ 04-06-1981 ರಂದು ನೊಂದಯಿತ ಖರೀದಿ ಪತ್ರದ ಸಂಖ್ಯೆ: 654/1981-82 ದಿನಾಂಕ 04-06-1981 ರಂದು ಮಾರಾಟ ಮಾಡಿದ್ದರು ಮತ್ತು ಹುಸೇನ್ ಬೀ ಗಂಡ ಬಾಷುಮಿಯ ಆಕೆಯ ಗಂಡನಾದ ಬಾಷುಸಾಬ್ ತಂದೆ ರಾಜ ಹುಸೇನ್ ಸಾಬ್ ರವರು ನೀವು ಖರೀದಿಸಿದ 9 ವರ್ಷಗಳ ಪೂರ್ವದಲ್ಲಿ ಆಕೆಯ ಗಂಡನಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬಾಷುಸಾಬ್ ತಂದೆ ರಾಜ ಹುಸೇನ್ ಸಾಬ್ ರವರು ತಾವು ಖರೀದಿ ಮಾಡಿದ ದಾವ ಆಸ್ತಿಯನ್ನು ಪುನಃ ವಾದಿ ಶಿವಶಂಕರ ತಂದೆ ಪೆದ್ದ ವೆಂಕಟರೆಡ್ಡಿ ಇವರಿಗೆ ದಿನಾಂಕ 25-06-1998 ರಂದು ಮರು ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಾನು ಕಳೆದ 12 ವರ್ಷಗಳಿಂದ ಮುಡಬಿದರಿ, ಮಂಗಳೂರು-ಜಿಲ್ಲೆಯಲ್ಲಿ ವಾಸವಾಗಿದ್ದರಿಂದ ಯಾರು ಸ್ವಾದೀನದಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪುನಃ ಸಾಕ್ಷಿಯು ನುಡಿಯುವುದೇನೆಂದರೆ ಡಾಕ್ಟರ್ ಸ್ವಾದೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ದಾವ ಆಸ್ತಿಯು ಕಾಲಿ ಜಾಗ ಎಂದರೆ ಸರಿ. ನಾನು ಕಳೆದ 12 ವರ್ಷಗಳಿಂದ ಮುಡಬಿದರಿ, ಮಂಗಳೂರು-ಜಿಲ್ಲೆಯಲ್ಲಿ ವಾಸವಾಗಿದ್ದರಿಂದ ಈಗಲೂ ದಾವ

ಅಸ್ತಿಯು ಕಾಲಿ ಪ್ಲಾಟ್ ಇದೆ ಎಂದರೆ ಸರಿ. ನಾನು ಮಾರಾಟ ಮಾಡಿದ ಆಸ್ತಿ ಬೇರೆ ಕಡೆ ಇದೆ ಅದ್ಯಗೂ ಕೂಡ ನಾನು ವಾದಿಯವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿದ ಆಸ್ತಿ ಜವಳಗೇರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದ್ದರು ಕೂಡ ಸಿಂಧನೂರು ನಗರದ ವ್ಯಾಪ್ತಿ ಅಂತ ಸುಳ್ಳೂ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿ ಸಿಂಧನೂರು ನಗರಸಭೆಯಲ್ಲಿ ಮ್ಯುಟೇಷನ್ ಮಾಡಿಸಿದ್ದೇನೆ.

2. ನಾನು ಮಾರಾಟ ಮಾಡುವ ವೇಳೆಯಲ್ಲಿ ಜವಳಗೇರ ಗ್ರಾಮಪಂಚಾಯತಿ ಮ್ಯುಷೇಷನ್, ಸಿಂಧನೂರ ನಗರಸಭೆಯ ಮ್ಯುಟೇಷನ್ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಾನು ಗ್ರಾಮ ಪಂಚಾಯತಿ ದಾಖಲೆಗಳನ್ನು ಮಾತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸಿಂಧನೂರ ನಗರಸಭೆಯ ಮ್ಯುಟೇಷನ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯ್ಲಲ. ನಾನು ಮಾರಾಟ ಮಾಡಿದ ಆಸ್ತಿ ಜವಳಗೇರಾ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬಂದರು ಕೂಡ, ನಾನು ಸಿಂಧನೂರು ವ್ಯಾಪ್ತಿಯಲ್ಲಿ ಬರುತ್ತದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಿಂಧನೂರ ನಗರಸಭೆಯ ಮ್ಯುಟೇಷನ್ ಪ್ರತಿಗಳನ್ನು ನ್ಯಾಯಾಲಯದಕ್ಕೆ ಸಲ್ಲಿಸಿಲ್ಲ ಅಂತ ಸೂಚಿಸಿದಾಗ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆ ಸಲ್ಲಿಸಿದ ನಂತರ ಶಂಕರಪ್ಪ ರವರ ಹೆಸರಿನಲ್ಲಿ ಮ್ಯುಟೇಷನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಷಯ ಗೊತ್ತ ಇರದೆ ಕೂಡ ಪ್ರತಿವಾದಿಗೆ ಸಹಾಯ ಮಾಡಲು ಮತ್ತು ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ಅಂಶಗಳು ಸುಳ್ಳು ಇರುತ್ತವೆ ಮತ್ತು ಅದರಲ್ಲಿಯ ವಿಳಾಸ ಕೂಡ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವ ಅಸ್ತಿಯ ಪಕ್ಕ ನನ್ನ ಹೋಟೆಲ್ ಇದೆ. ಹೋಟೆಲ್ ದಾವ ಅಸ್ತಿಯಿಂದ ½ ಕಿ..ಮೀ ದೂರದಲ್ಲಿ ಇದೆ ಎಂದರೆ ಸರಿ. ನಾನು 12 ವರ್ಷಗಳ ನಂತರ ಇಂದೆ ಪ್ರಥಮ ಬಾರಿಗೆ ಸಿಂಧನೂರು ಪಟ್ಟಣಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು**